# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 178(1423) |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.03.2025 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿರವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರಿನಲ್ಲಿ ಹಲವು ಕೆರೆಗಳು ಅನೇಕ ದಶಕಗಳ ಹಿಂದೆ ಒತ್ತುವರಿಯಾಗಿ ಅಭಿವೃದ್ಧಿಯಾಗಿದ್ದು, ಇಲ್ಲಿ ಇನ್ನೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಇರುವ ನಿಯಮಗಳೇನು; | ದಶಕಗಳ ಹಿಂದೆ ಬೆಂಗಳೂರು ನಗರದಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ವತಿಯಿಂದ ಕೆಲವೊಂದು ನಿರ್ಜೀವ ಕೆರೆಗಳನ್ನು ಬಳಸಿಕೊಂಡು ಬಡಾವಣೆಯನ್ನು ನಿರ್ಮಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ PWD 82 IMB 1985, Bangalore dated:26.07.1985 ರಲ್ಲಿ ಕೆರೆಗಳ ಒತ್ತುವರಿ ಕುರಿತಂತೆ ಪರಿಶೀಲಿಸಲು ಲಕ್ಷ್ಮಣ್ ರಾವ್ ಸಮಿತಿಯನ್ನು ರಚಿಸಲಾಗಿದ್ದು. ಸದರಿ ಸಮಿತಿಯು ಪರಿಶೀಲಿಸಿ ನಿರ್ಜೀವ ಕೆರೆಗಳನ್ನು ಗುರುತಿಸಿ, ಸದರಿ ಕೆರೆಗಳಲ್ಲಿ ರಚಿಸಿರುವ ಬಡಾವಣೆಗಳು ನಿರ್ಜೀವ ಕೆರೆಗಳಲ್ಲಿ ರಚಿಸಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ವರದಿಯ ಆಧಾರದ ಮೇಲೆ ನಿರ್ಜೀವ ಕೆರೆಗಳಲ್ಲಿ ರಚಿಸಿರುವ ಬಡಾವಣೆಗಳನ್ನು 1985ನೇ ಸಾಲಿನಲ್ಲಿ ಅನುಮೋದಿಸಲಾಗಿರುತ್ತದೆ ಹಾಗೂ ಅಭಿವೃದ್ಧಿಗೊಳಿಸಲಾಗಿರುತ್ತದೆ.<br><br>ಪ್ರಸ್ತುತ ಯಾವುದೇ ಕೆರೆಗಳಲ್ಲಿ ಬಡಾವಣೆಗಳನ್ನು ರಚಿಸಲಾಗುತ್ತಿಲ್ಲ. |
| (ಆ) | ಬೆಂಗಳೂರಿನ ಹಲವು ಕಡೆಗಳಲ್ಲಿ ಕೆರೆಗಳ ಪ್ರದೇಶದಲ್ಲಿ ಸಂಪೂರ್ಣ ಅಭಿವೃದ್ಧಿಯಾಗಿದ್ದು, ಪಕ್ಕದಲ್ಲಿನ ಪ್ರದೇಶಗಳನ್ನು ಕೆರೆ ಬಫರ್ ಜೋನ್ ಎಂದು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲವೆಂದು ಅಧಿಕಾರಿಗಳು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಂದಾಯ ದಾಖಲಾತಿಗಳಲ್ಲಿ ಕೆರೆ ಎಂದು ನಮೂದಾಗಿ ಪ್ರಸ್ತುತ ಆ ಕೆರೆಯು ಸ್ಥಳದಲ್ಲಿ ಅಭಿವೃದ್ಧಿ ಹೊಂದಿದ್ದರೂ ಸಹ ಅಂದರೆ, ಕೆರೆಯು ಕೆರೆಯ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದರೂ ಸಹ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 2014 ರ ಕಲಂ 12(3) ರನ್ವಯ ಕೆರೆ ಎಂದು ಪರಿಗಣಿಸಬೇಕಾಗಿದ್ದು, ಕೆರೆ ಎಂದು ಪರಿಗಣಿಸಿದ ನಂತರ ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಂತೆ ಕೆರೆಯ ಅಂಚಿನಿಂದ 30.0 ಮೀ ಬಫರ್ ಕಾಯ್ದಿರಿಸಬೇಕಾಗಿರುತ್ತದೆ. |

---2

| | | |
|---|---|---|
| | | ದಿನಾಂಕ 25.06.2007 ರಂದು ಅನುಮೋದನೆಗೊಂಡ ಮಹಾಯೋಜನೆ RMP-2015 ಕ್ಕಿಂತ ಮುಂಚಿತವಾಗಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ /ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿನ ನಿವೇಶನಗಳಿಗೆ, ಬಫರ್ ಅನ್ವಯವಾಗುವುದಿಲ್ಲ ಎಂದು ಮಾನ್ಯ ಉಚ್ಚ ನ್ಯಾಯಾಲಯವು WP No. 15298/2020 ರಲ್ಲಿ ದಿನಾಂಕ: 06.04.2020 ರಂದು ತೀರ್ಪುನೀಡಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ.<br>ದಿನಾಂಕ 25.06.2007 ರ ನಂತರ ಜಾರಿಗೊಂಡ RMP-2015 ರಂತೆ ಪ್ರಾಧಿಕಾರದಿಂದ ಅನುಮೋದಿಸುತ್ತಿರುವ / ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳಲ್ಲಿ RMP-2015 ರಂತೆ ಕೆರೆಗೆ ಬಫರ್ ಅಳವಡಿಸಿಕೊಳ್ಳುತ್ತಿದ್ದು, ಕೆರೆಯ ಅಂಚಿನಿಂದ 30.0 ಮೀ ಕೆರೆ ಬಫರ್ ಕಾಯ್ದಿರಿಸಿದ ನಂತರವೇ ನಿವೇಶನಗಳ ರಚನೆ / ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿರುತ್ತದೆ. |
| ಇ) | ಹಾಗಿದ್ದಲ್ಲಿ, ಕೆರೆ ಇಲ್ಲದ ಮೇಲೆ ಬಫರ್ ಜೋನ್ ಎಂದು ಅಭಿವೃದ್ಧಿಗೆ ಅನುಮತಿ ನಿರಾಕರಿಸಲು ಕಾರಣಗಳೇನು: | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆರೆಗೆ ಹೊಂದಿಕೊಂಡಂತೆ ಇರುವ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 2014 ರ ಕಲಂ 12(3) ರ ಅನುಸಾರ ಹಾಗೂ ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಂತೆ ಮತ್ತು ಕಂದಾಯ ಇಲಾಖೆಯ ಗ್ರಾಮನಕ್ಷೆಯಲ್ಲಿ ಕೆರೆ ಎಂದು ಚಿಹ್ನೆ ಇದ್ದಲ್ಲಿ, ಅದರಂತೆ ಕೆರೆಯ ಅಂಚಿನಿಂದ 30.0 ಮೀ ಬಫರ್ ಕಾಯ್ದಿರಿಸಲಾಗುತ್ತಿದೆ ಹಾಗೂ ನಾಲೆಗೆ ಹೊಂದಿಕೊಂಡಂತೆ ಇರುವ ಜಮೀನುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ RMP-2015 ರ ವಲಯ ನಿಯಮಾವಳಿಗಳ Clause 4.12.2 Note ರ ಅನುಸಾರ ನಾಲಾ ಬಫರ್ ಕಾಯ್ದಿರಿಸಲಾಗಿರುತ್ತದೆ. |
| ಈ) | 1990 ರಿಂದ ಇಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಿ.ಡಿ.ಪಿ. ಪರಿಷ್ಕರಣೆ ಮಾಡಲಾಗಿದೆಯೇ ಪರಿಷ್ಕರಣೆ ಮಾಡದಿದ್ದಲ್ಲಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆ-1995 ದಿನಾಂಕ 05.01.1995 ರಂದು ಅನುಮೋದನೆಯಾಗಿರುತ್ತದೆ. ತದನಂತರ ದಿನಾಂಕ 25.06.2007 ರಲ್ಲಿ ಪರಿಷ್ಕೃತ ಮಹಾಯೋಜನೆ-2015 (RMP-2015) ಅನುಮೋದನೆಯಾಗಿರುತ್ತದೆ. ಪ್ರಸ್ತುತ ದಿನಾಂಕ 25.06.2007 ರಂದು ಅನುಮೋದನೆಯಾಗಿರುವ ಪರಿಷ್ಕೃತ ಮಹಾಯೋಜನೆ -2015 ಚಾಲ್ತಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 123 ಬೆಂಅಸೇ 2025(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ